




ವೆಂಕಟಪ್ಪನವರು ಸೃಜಿಸಿದ ರವೀಂದ್ರನಾಥ ಟ್ಯಾಗೋರರ ಪೋರ್ಟ್ರೈಟ್ ಹಾಗೂ 1922ರಲ್ಲಿ ಅರಮನೆಯ ಡಿಸ್ಪೆನ್ಸರಿ ಸ್ಟುಡಿಯೋದಲ್ಲಿ ರಚಿಸಿದ 'ವೀಣೆಯ ಹುಚ್ಚು' ಕಲಾಕೃತಿ. ಈ ಕೃತಿಯಲ್ಲಿ ದೃಶ್ಯಕಲೆಗಿಂತಲೂ ಸಂಗೀತಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ ಹಿನ್ನೆಲೆ ಕೆಲಸ ಮಾಡಿದೆ.

ತಂದಿರಿಸಿಬಿಟ್ಟಿರುವುದು. ಮೆರವಣಿಗೆಯ ಕಾಲಕ್ಕೆ ನಡೆವ ಉಪಕಥನಗಳ ಭಿತ್ತಿಗಳಿವು. ಈ ಚಿತ್ರದಲ್ಲಿರುವ ಪ್ರಮುಖರೆಲ್ಲರನ್ನೂ ಗುರ್ತಿಸಬಹುದಾಗಿದೆ. ಅಥವ ಗುರ್ತಿಸಲಾಗುವಂತೆಯೇ ಚಿತ್ರಗಳನ್ನು ಮೂಡಿಸಲಾಗಿದೆ. ಮೈಸೂರು ಪ್ರಾಚ್ಯವಸ್ತು ಇಲಾಖೆಯು 1994ರಲ್ಲಿ ಪ್ರಕಟಿಸಿರುವ ಎಲ್ಲಾ ಭಿತ್ತಿಚಿತ್ರಗಳನ್ನೊಳಗೊಂಡ ಪುಸ್ತಿಕೆಯಲ್ಲಿ ಪ್ರತಿಚಿತ್ರದಲ್ಲಿ ಮೂಡಿಬಂದಿರುವ ಪ್ರಮುಖರೆಲ್ಲರ ಹೆಸರುಗಳ ಪಟ್ಟಿಗಳೂ ಇವೆ.

ಈ 29 ಭಿತ್ತಿಚಿತ್ರಗಳ ವಿಶೇಷವಿರುವುದೇ ಇಲ್ಲಿ. ಸಾರಾಸಗಟಾಗಿ ಈ ಸರಣಿಚಿತ್ರಗಳ ಸಂದೇಶ ಒಂದಿದೆ: 'ಬಿರುದು ಬಾವಲಿಗಳಿಲ್ಲದ ವ್ಯಕ್ತಿತ್ವಗಳು ಅರಮನೆಯ ಆಶ್ರಯದಲ್ಲಿ ಅನುಪಸ್ಥಿತರು' ಎಂಬುದೇ ಆ ನುಡಿ. ಆದರೆ ಕಲಾವಿದ ರಚಿಸಿರುವ ರೀತಿ, ಅವನ ದೃಷ್ಟಿಕೋನ, ಸಾಮಾನ್ಯ ಜನರನ್ನೂ ತನ್ನನ್ನೂ ಮೆರವಣಿಗೆಯನ್ನು ಸಾಕ್ಷಿ ಮಾಡಿ ಪ್ರತ್ಯೇಸಿರುವುದು, ತನ್ನವರನ್ನು ತನ್ನೆಡೆಯೇ ಉಳಿಸಿಕೊಂಡಿರುವುದು, ಇವೆಲ್ಲವೂ ಚಿತ್ರಗಳ ಮೂಲೋದ್ದೇಶಕ್ಕೆ ವಿರುದ್ಧವಾದುದು. ಈ ಚಿತ್ರಗಳಲ್ಲಿ ಅನಾಮಿಕರಿಗೆ ಪ್ರವೇಶವಿಲ್ಲದಿರಬಹುದು, ಆದರೆ ಹಾಗೆ ಚಿತ್ರಿಸುವ ಮೂಲಕ ಮಾತ್ರ ಅನಾಮಿಕನಾಗಿರುವ ಕಲಾವಿದನೊಬ್ಬ ತನ್ನತನವನ್ನು ಕಂಡುಕೊಳ್ಳುತ್ತಿದ್ದಾನೆ. ಅರಮನೆ ಅದನ್ನು ಸಹಿಸಿಕೊಳ್ಳುತ್ತಿದೆ ಕೂಡ!

ಇಲ್ಲಿನ ಪ್ರತಿಯೊಂದು ಭಿತ್ತಿಚಿತ್ರದ ರಚನೆಗೂ ಹಿಡಿದಷ್ಟೇ ಕಾಲಾವಧಿಯು ಅದರ ಮೂಲ ಆಧಾರವಾದ ಛಾಯಾಚಿತ್ರಗಳನ್ನು ಮೂಡಿಸಲು, ಅದಕ್ಕೆ ಅಗತ್ಯವಿರುವ ವ್ಯಕ್ತಿಗಳ ವೇಷಭೂಷಣಗಳ ವಿನ್ಯಾಸಕ್ಕೆ, ಅರಮನೆಯೊಂದಿಗೆ ಇಲ್ಲಿನ ಪ್ರತಿಯೊಬ್ಬರಿಗೂ ಇರುವ ಬಿರುದು ಬಾವಲಿಗಳೊಂದಿಗೆ ಗುರ್ತಿಸುವುದರಲ್ಲಿಯೂ ವ್ಯಯವಾಗಿದೆ. ಮುಂದಿನ ಪೀಳಿಗೆಗೆ ಚಿರಾಯುವಾಗಿ ಉಳಿಯಲಿರುವ ಅರಮನೆಯ ವಿಸ್ತೃತ ಕುಟುಂಬದ ಫ್ಯಾಮಿಲಿ– ಆಲ್ಬಂ ಆಗಿ ಹೊರಹೊಮ್ಮಲಿರುವ ದೃಶ್ಯಗಳಿವು ಎಂಬ ಸ್ಪಷ್ಟ ಅರಿವಿನಿಂದಲೇ ಹುಟ್ಟಿಕೊಂಡ ಕೃತಿಗಳಿವು. 'ನಾಳೆ ಇತಿಹಾಸವು ನಮ್ಮ ಬಗ್ಗೆ ಏನೆಂದುಕೊಳ್ಳುತ್ತದೆ' ಎಂಬ ಪ್ರಸಿದ್ಧ ಹಿಂದಿ ಪೌರಾಣಿಕ ಮಹಾಭಾರತ ಸೀರಿಯಲ್ಲಿನ ಡೈಲಾಗ್ ಈ ಚಿತ್ರಗಳಲ್ಲಿಯೂ ಬಹಳ ಪ್ರಸ್ತುತ.

ಮೈಸೂರು ರಾಜ್ಯಾಡಳಿತಕ್ಕೊಂದು ಕಲಾತ್ಮಕ ವ್ಯಕ್ತಿತ್ವವನ್ನು ರೂಪಿಸಿಕೊಡುವ ಸಲುವಾಗಿ ಸೃಷ್ಟಿಗೊಂಡ ಕಲಾಕೃತಿಗಳಿವು. ಅರಮನೆಯಲ್ಲಿರುವ ಕಲಾಕೃತಿಗಳಲ್ಲಿ ಯಾವುದೂ ಆಕಸ್ಮಿಕವಲ್ಲ. ನಿರ್ದಿಷ್ಟ ಸಂಗ್ರಹಾಲಯ ಸಂಸ್ಕೃತಿಯೊಂದು ಇಲ್ಲದಿರುವ ಭಾರತದಲ್ಲಿ, ಈ ಕೃತಿಗಳನ್ನು ಮುಖ್ಯವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸಂಯೋಜಿಸಿದ್ದರು. ಆಗೆಲ್ಲ ಚಿತ್ರಕಲೆಗಿಂತಲೂ ಸಂಗೀತಕ್ಕೆ, ಸಂಗೀತಗಾರರಿಗೆ ಹೆಚ್ಚಿನ ಹಣ–ಆದ್ಯತೆಯನ್ನು ಅರಮನೆ ಗುರುಮನೆಗಳು ನೀಡುತ್ತಿದ್ದವು. ತಮ್ಮ ಚಿತ್ರರಚನೆಯ ಕಲಿಕೆಗಾಗಿ ಅರಮನೆಯಿಂದ ಅಪಾರ ವೆಚ್ಚವನ್ನು ಮಾಡಿಸಿದ ವೆಂಕಟಪ್ಪನವರು ಬೆಂಗಾಲದ ಶಿಕ್ಷಣದ ನಂತರ ಹಿಂದಿರುಗಿದಾಗ ಇದೇ ಕಲಾತ್ಮಕ ಮೇಲು–ಕೀಳಿನಿಂದಾಗಿ ಸಂಗೀತದಲ್ಲಿ ಆಸಕ್ತರಾದದ್ದು, ಅರಮನೆಯ ಆಡಳಿತಾತ್ಮಕ ಕಾರಣದಿಂದಾಗಿಯೇ. ವಿಚಿತ್ರವೆಂದರೆ, ಇಂದು ಅವರ ಚಿತ್ರಗಳು ಉಳಿದುಕೊಂಡಿವೆಯೇ ಹೊರತು, ಅಲ್ಲಿ ಅವರ ಸೃಷ್ಟಿಯ ಶರೀರ ಗೋಚರಿಸುವಂತೆ ಶಾರೀರ ಖಂಡಿತಾ ಗೋಚರಿಸದು. ಅಂದರೆ ಅಂದು ವೆಂಕಟಪ್ಪನವರು ಕಲಿತ ಸಂಗೀತವು ಇಂದು ಯಾರ ಅರಿವಿಗೂ ಬಂದಿಲ್ಲ. ಆದರೆ ಆ ಅನ್ಯವಿಷಯಾಸಕ್ತಿಯಿಂದಾಗಿ ಅವರು ಅನುಭವಿಸಿದ ತುಮುಲ, ಅವರ ಗುರು ಅವನೀಂದ್ರನಾಥ ಟ್ಯಾಗೋರ್ ಹಾಗೂ ಅರಮನೆಯ ಸಂಗೀತದ